1	2	3	4
3)	ಬೆಂಗಳೂರು (ಗ್ರಾಮಾಂತರ)	1587	16
4)	ತುಮಕೂರು	1339	39
5)	ಚಿತ್ರದುರ್ಗ	684	33
6)	ಕೋಲಾರ	2241	81
7)	ಶಿವಮೊಗ್ಗ	968	18
8)	ದಾವಣಗೆರೆ	1227	55
9)	ಮೈಸೂರು	1547	60
10)	ಮಂಡ್ಯ	1449	25
11)	ಹಾಸನ	1176	01
12)	ಕೊಡಗು	339	18
13)	ಮಂಗಳೂರು	731	24
14)	ಚಿಕ್ಕಮಗಳೂರು	514	13
15)	ಚಾಮರಾಜನಗರ	578	3
16)	ಉಡುಪಿ	496	13
17)	ಬೆಳಗಾಂ	3729	184
18)	ಬಿಜಾಪುರ	948	70
19)	ಧಾರವಾಡ	999	51
20)	ಕಾರವಾರ	835	50
21)	ಹಾವೇರಿ	933	13
22)	ಗದಗ	891	58
23)	ಬಾಗಲಕೋಟೆ	1158	43
24)	ಗುಲ್ಬರ್ಗಾ	1498	190
25)	ರಾಯಚೂರು	680	33
26)	ಬೀದರ್	805	26
27)	ಬಳ್ಳಾರಿ	1018	46
28)	ಕೊಪ್ಪಳ	498	21
	ಒಟ್ಟು	30,862	1286

ರಾಜ್ಯದಲ್ಲಿ ಬೆಳೆ ವಿಮೆ ನೀಡುವುದಕ್ಕಾಗಿ ರೈತರಿಂದ ಪಡೆದ ಹಣ

1659 (2325) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂಣ) - ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ವಿಮೆ ನೀಡುವುದಕ್ಕಾಗಿ ರಾಜ್ಯದ ರೈತರಿಂದ ಪಡೆದ ಹಣ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಅ) ಬೆಳೆಯಿಂದ ಆದ ನಷ್ಟಕ್ಕೆ ರೈತರುಗಳಿಗೆ ವಿಮಾ ಹಣವನ್ನು ನೀಡಲಾಗಿದೆಯೇ ;

ಇ) ನೀಡಲಾಗಿದ್ದರೆ, ಎಷ್ಟು ಜನ ರೈತರಿಗೆ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು);

ಈ) ಬೆಳೆ ವಿಮೆ ಹಣ ನೀಡಲು ಅಧಿಕಾರಿಗಳು ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಈ ಬೆಳೆ ವಿಮೆ ಯೋಜನೆಯಲ್ಲಿ ಅಧಿಕಾರಿಗಳು ಅವ್ಯವಹಾರ ನಡೆಸಿರುವುದು ನಿಜವೇ;

ಊ) ಬೆಳೆ ವಿಮೆ ನೀಡಲು ಅನುಸರಿಸುತ್ತಿರುವ ಮಾನದಂಡವೇನು ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಬೆಳೆ ವಿಮೆ ನೀಡುವುದಕ್ಕಾಗಿ ಇದುವರೆಗೂ ಅಂದರೆ 2000-01 ಮತ್ತು 2001-02ನೇ ಸಾಲುಗಳಿಗೆ ರಾಜ್ಯದ ರೈತರಿಂದ ಪಡೆದ ಹಣ ಅಂದರೆ ವಿಮಾ ಕಂತು ಒಟ್ಟು ರೂ. 2554.97 ಲಕ್ಷಗಳು. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2000-01 ಮತ್ತು 2001-02ರ ಸಾಲುಗಳಿಗೆ ಬೆಳೆಯಿಂದ ಆದ ನಷ್ಟಕ್ಕೆ ವಿಮಾ ಹಣವನ್ನು ನೀಡಲಾಗಿದೆ.

ಇ) ಇದುವರೆವಿಗೂ ಒಟ್ಟು 340503 ಜನ ರೈತರಿಗೆ ವಿಮಾ ನಷ್ಟ ಪರಿಹಾರವನ್ನು ನೀಡಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ಇಲ್ಲ.

ಉ) ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಬೆಳೆ ವಿಮೆ ಯೋಜನೆಯಲ್ಲಿ ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ವಿಚಾರಣೆಯನ್ನು ನಡೆಸಲಾಗುತ್ತಿದೆ.

ಊ) ಅಧಿಸೂಚಿತ ಬೆಳೆಗಳ ಅಧಿಸೂಚಿತ ಪ್ರದೇಶದಲ್ಲಿನ ಬೆಳೆ ಕಟಾವು ಪ್ರಯೋಗಗಳ ಫಲಿತಾಂಶದ ಮೂಲಕ ಪಡೆಯಲಾದ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿ (ಥ್ರೆಷೋಲ್ಡ್ ಯೀಲ್ಡ್) ಗಿಂತ ಕಡಿಮೆ ಬಂದರೆ ಇಳುವರಿಯ ಕೊರತೆಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ನೀಡಲಾಗುವುದು.

ಅನುಬಂಧ

2000-01 ಮತ್ತು 2001-02ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಬೆಳೆ ವಿಮೆಗಾಗಿ ರೈತರು ನೀಡಿದ ವಿಮಾ ಕಂತನ್ನು ನಷ್ಟ ಪರಿಹಾರ ಪಡೆದ ರೈತರ ಸಂಖ್ಯೆಯ ಜಿಲ್ಲಾವಾರು ವಿವರ:

ಕ್ರಮ ಸಂಖ್ಯೆ	ಜಿಲ್ಲೆಗಳು	ವಿಮಾ ಕಂತು ಲಕ್ಷ ರೂ.ಗಳಲ್ಲಿ	ನಷ್ಟ ಪರಿಹಾರ ಪಡೆದ ರೈತರ ಸಂಖ್ಯೆ
1.	ಬೆಂಗಳೂರು	0.44	146
2.	ಬೆಳಗಾವಿ	48.38	23.420
3.	ಬಳ್ಳಾರಿ	87.58	768
4.	ಬೀದರ್	160.16	38.416
5.	ಬಿಜಾಪುರ	57.99	307
6.	[illegible]	29.93	2.298

1	2	3	4
7.	ಚಿತ್ರದುರ್ಗ	63.14	5,433
8.	ದಕ್ಷಿಣ ಕನ್ನಡ	2.95	308
9.	ಧಾರವಾಡ	108.64	18.123
10.	ಗುಲ್ಬರ್ಗಾ	509.31	58.853
11.	ಹಾಸನ	6.9	4.076
12.	ಕೋಲಾರ	40.53	6.826
13.	ಮಂಡ್ಯ	9.97	644
14.	ಮೈಸೂರು	44.6	5.394
15.	ರಾಯಚೂರು	173.74	3.751
16.	ಶಿವಮೊಗ್ಗ	154.49	31.310
17.	ತುಮಕೂರು	70.51	11.789
18.	ಉತ್ತರ ಕನ್ನಡ	121.24	37.495
19.	ಕೊಡಗು	86.69	0
20.	ಕೊಪ್ಪಳ	130.73	1.257
21.	ಚಾಮರಾಜನಗರ	22.38	15.834
22.	ದಾವಣಗೆರೆ	245.33	8.618
23.	ಬಾಗಲಕೋಟೆ	60.61	1.910
24.	ಗದಗ	155.76	20.588
25.	ಹಾವೇರಿ	158.38	32.939
26.	ಉಡುಪಿ	4.59	0
	ಒಟ್ಟು	2.544.97	3.40.503

ತೋಟಗಾರಿಕಾ ರಫ್ತು ವಲಯಗಳ ಸ್ಥಾಪನೆ

1660 (2213) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) - ಮಾನ್ಯ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಅದರ ವಿವರಗಳೇನು ; ರಫ್ತು ವಲಯಗಳನ್ನು ಯಾವ ಯಾವ ಪ್ರದೇಶಗಳಲ್ಲಿ ಸ್ಥಾಪಿಸಲಾಗುವುದು ; ಮತ್ತು ಇದು ಯಾವ ಯಾವ ತೋಟಗಾರಿಕಾ ಉತ್ಪನ್ನಗಳ ಕುರಿತು ಕಾರ್ಯನಿರತವಾಗಿದೆ ;

ಇ) ರಾಜ್ಯದ ಎಷ್ಟು ಕಡೆಗಳಲ್ಲಿ ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆಗೆ ಶೀತಲ ಕೇಂದ್ರಗಳನ್ನು ನಿರ್ಮಿಸಲಾಗಿದೆ ; ಇಂಥ ಶೀತಲ ಕೇಂದ್ರಗಳು ಬೇಡಿಕೆಗೆ ಅನುಗುಣವಾಗಿದೆಯೇ ?